**<u>ದಿಃ 26-09-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಮುಖ್ಯ ವಿಚಾರಣೆಃ, ಸರ್ಕಾರಿ ಅಭಿಯೋಜಕರಿಂದ</u>**

(ನ್ಯಾಯಾಲಯದ ಮುಂದೆ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡಂತಹಾ ಸಿಡಿಯನ್ನು ಪೋಲೀಸರ ಲ್ಯಾಪ್ ಟಾಪ್ ಮೂಲಕ ಚಲಾಯಿಸಿ ಸಾಕ್ಷಿಗೆ ತೋರಿಸಲಾಯಿತು.)

ಸದ್ರಿ ಸಿಡಿ ದೃಶ್ಯಾವಳಿಯಲ್ಲಿ 2 ನೇ ಆರೋಪಿ ಮತ್ತು ಅವನ ಮಗ ಹೊಂಡದಿಂದ ಮಣ್ಣು ಹೊರಗೆ ಹಾಕುತ್ತಿರುವುದು ಕಂಡು ಬರುತ್ತದೆ ಮತ್ತು ಅದರಲ್ಲಿ ಕೇಳುವ ಧ್ವನಿ ತನ್ನದೆಂದು ಸಾಕ್ಷಿ ನುಡಿಯುತ್ತಾರೆ. ಸದ್ರಿ ಸಿಡಿಯನ್ನು **<u>ಮು.ಮಾ.1</u>** ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಿದ್ದು ಅದರಲ್ಲಿದ್ದ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದ್ರಿ ಎರಡು ಛಾಯಾಚಿತ್ರಗಳನ್ನು ಒಟ್ಟಾಗಿ <u>ನಿಪಿ-7</u> ಎಂದು ಗುರುತಿಸಲಾಯಿತು. ಸದ್ರಿ ಫೋಟೋಗಳು ಸಹಾ ಮು.ಮಾ.1 ಸಿಡಿನಲ್ಲಿ ಕಂಡು ಬರುತ್ತದೆ.

**<u>ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ</u>**

ಚಾಸಾ.1 ರಿಂದ 6 ರವರು ನಮ್ಮ ಕುಟುಂಬದವರು ಮತ್ತು ನನ್ನ ಸಂಬಂಧಿಕರು ಆಗಿರುತ್ತಾರೆ. 1 ನೇ ಆರೋಪಿತಳು ಸರಕಾರಿ ಜಾಗಲ್ಲಿ ಮನೆ ಮಾಡಿಕೊಂಡಿದ್ದಾಳೆ ಎಂದರೆ ಸಾಕ್ಷಿ ಸರಿ ಅಲ್ಲಾ ಅದು ಫಾಸ್ಟು ಫುಡ್ ತಯಾರು ಮಾಡುವಂತಹಾ ಶೆಡ್ ಆಗಿರುತ್ತದೆ ಅಂತ ನುಡಿಯುತ್ತಾರೆ. ಸದ್ರಿ ಆರೋಪಿತಳ ಶೆಡ್ ನಮ್ಮ ಮನೆಯಿಂದ 60 ಫೀಟು ಅಂತರದಲ್ಲಿ ಇದೆ. ನಮ್ಮ ಅಜ್ಜಿ ವೆಂಕು ಇವಳಿಗೆ ಗುಜ್ಜಾಡಿ ಗ್ರಾಮದ ಸರ್ವೇ 145/1 ಎ ರಲ್ಲಿ 2.05 ಎಕ್ರೆ ಜಾಗ ಮಂಜೂರಾಗಿರುತ್ತದೆ ಎಂದರೆ ಸರಿ. ಆ ಜಾಗದಲ್ಲಿ ನಮ್ಮ ಎಲ್ಲಾ ಕುಟುಂಬದವರಿಗೆ ಪಾಲಾಗಬೇಕೆಂದರೆ ಸರಿ. ಸದ್ರಿ ಜಾಗದಲ್ಲಿ ನಾವು ಮುಂದೆ ಇದ್ದಂತಹಾ ಒಂದು ಹಳೆ ಮನೆ ತೆಗೆದು ಮನೆ ಕಟ್ಟಿಕೊಳ್ಳಬೇಕಾಗುತ್ತದೆ. ಆರೋಪಿ ಶೆಡ್ ಇದ್ದ ಜಾಗ ಗುಜ್ಜಾಡಿ ಗ್ರಾಮದ ಸರ್ವೇ ನಂಬ್ರ 7 ರಲ್ಲಿ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ಸಾಕ್ಷಿ ಸದ್ರಿ ಜಾಗ ನಮ್ಮ ಜಾಗದ ಮುಂದುಗಡೆ ಬರುತ್ತದೆ ಅಂತ ನುಡಿಯುತ್ತಾರೆ. ಸದ್ರಿ ಆರೋಪಿತರು ತೆಗೆಯುತ್ತಿದ್ದಂತಹಾ ಹೊಂಡ

ನಮ್ಮ ಸರ್ವೇ ನಂಬ್ರದೊಳಗೆ ಬರುವುದಿಲ್ಲ ಅದು ಪಿಡಬ್ಲ್ಯುಡಿ ಇಲಾಖೆಗೆ ಸಂಬಂಧಪಟ್ಟಂತಹಾ ಜಾಗದಲ್ಲಿ ಬರುತ್ತದೆ ಅಂತ ಸಾಕ್ಷಿ ನುಡಿಯುತ್ತಾರೆ. ಆರೋಪಿತರು ತಮ್ಮ ಶೆಡ್ ಗೆ ಹೊಂದಿಕೊಂಡು ಸದ್ರಿ ಹೊಂಡ ತೆಗೆದಿದ್ದಾರೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ಸದ್ರಿ ಶೆಡ್‌ನ್ನು ಆರೋಪಿತರು 25 ವರ್ಷದಿಂದ ಇದ್ದಾರೆ ಎಂದರೆ ಸಾಕ್ಷಿ ಸರಿ ಅಲ್ಲಾ ಒಂದು 15 ವರ್ಷದಿಂದ ಆ ಶೆಡ್‌ನಲ್ಲಿ ಇದ್ದಾರೆ ಅಂತ ನುಡಿಯುತ್ತಾರೆ. ನಮ್ಮ ಜಾಗಕ್ಕೆ ದಾರಿ ಸಮಸ್ಯೆ ಆಗುವುದರಿಂದ ಆರೋಪಿತರು ಅವರು ಈಗ ವಾಸ ಮಾಡಿದಂತಹಾ ಗುಜ್ಜಾಡಿ ಗ್ರಾಮದ ಸರ್ವೇ ನಂಬ್ರ 7 ರಲ್ಲಿರುವ ಶೆಡ್ ತೆರವುಗೊಳಿಸಬೇಕೆಂದು ನಮ್ಮ ತಕರಾರು. ಆರೋಪಿತರು ಸ್ವಾಧೀನದಲ್ಲಿದ್ದ ಜಾಗವನ್ನು ತೆರವುಗೊಳಿಸಬೇಕೆಂದು ಬೇರೆ ಬೇರೆ ಇಲಾಖೆಗೆ ಅರ್ಜಿ ಹಾಕಿದ್ದೀರಿ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ನಾವು ಮೆಸ್ಕಾಂ, ಗ್ರಾಮ ಪಂಚ್ಯಾತಿಗೆ, ಪಿಡಬ್ಲ್ಯುಡಿಗೆ ಮತ್ತು ಪೋಲೀಸರಿಗೆ ನೀಡಿದ ಅರ್ಜಿಯಲ್ಲಿ ಆರೋಪಿತರ ಸ್ವಾಧೀನದಲ್ಲಿದ್ದ ಕಟ್ಟಡವನ್ನ ತೆವುಗೊಳಿಸಲು ಅರ್ಜಿಗಳನ್ನು ಹಾಕಿದ್ದೇವೆ ಎಂದರೆ ಸಾಕ್ಷಿ ಅದು ಕಟ್ಟಡ ಅಲ್ಲಾ ಅಂಗಡಿ ಶೆಡ್ ಆಗಿದ್ದು ಅದನ್ನು ತೆರವುಗೊಳಿಸಲು ನಾವು ಅರ್ಜಿ ಹಾಕಿದ್ದೇವೆ ಅಂತ ನುಡಿಯುತ್ತಾರೆ. ಆರೋಪಿತರು ತಾನು ಸ್ವಾಧೀನದಲ್ಲಿದ್ದಂತಹಾ ಸ್ಥಳವನ್ನು ತನಗೆ ಮಂಜೂರು ಮಾಡಬೇಕೆಂದು ತಹಶೀಲ್ದಾರ್ ರವರಿಗೆ 94 ಸಿ ಅಡಿಯಲ್ಲಿ ಅರ್ಜಿ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಆರೋಪಿತರ ಸ್ವಾಧೀನದಲ್ಲಿ ಇದ್ದಂತಹಾ ಶೆಡ್‌ಗೆ ಗುಜ್ಜಾಡಿ ಗ್ರಾಮ ಪಂಚ್ಯಾತಿ ಶಿಫಾರಸ್ಸಿನ ಮೇರೆಗೆ ಮೆಸ್ಕಾಂ ರವರು ಬೆಳಕು ಯೋಜನೆಯಡಿ ಉಚಿತ ವಿದ್ಯುತ್ ಸಂಪರ್ಕ ನೀಡಿದ್ದಾರೆ ಎಂದರೆ ಸಾಕ್ಷಿ ನೀಡಿದ್ದು ನಿಜ ಆದರೆ ಅದು ತಪ್ಪಾಗಿರುತ್ತದೆ ಅಂತ ನುಡಿಯುತ್ತಾರೆ. ಸಾಕ್ಷಿ ಮುನ್ನುಡಿದು ಆ ಬಗ್ಗೆ ನಾವು ಪಂಚ್ಯಾತ್, ಮೆಸ್ಕಾಂಗೆ ನಮ್ಮ ಕುಟುಂಬದವರು ತಕರಾರು ಸಲ್ಲಿಸಿದ್ದೇವೆ ಅಂತ ನುಡಿಯುತ್ತಾರೆ. ನಮ್ಮ ಅರ್ಜಿಯ ಮೇರೆಗೆ ಮೆಸ್ಕಾಂ ರವರು ಆರೋಪಿತರಿಗೆ ಸದ್ರಿ ಅರ್ಜಿಗೆ ಉತ್ತರಿಸಲು ನೋಟೀಸನ್ನು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬಾರದೆಂದು ಆರೋಪಿತರು ಗುಜ್ಜಾಡಿ ಗ್ರಾಮ ಪಂಚ್ಯಾತ್ ಮತ್ತು ಮೆಸ್ಕಾಂ ರವರಮೇಲೆ ಮೂಲ ದಾವೆ ನಂಬ್ರ 43/23 ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸಹಾ ಆರೋಪಿತರು ಸ್ವಾಧೀನದಲ್ಲಿ ಇದ್ದಂತಹಾ ಶೆಡ್‌ಗೆ ವಿದ್ಯುತ್ ಸಂಪರ್ಕ ಇದೆ. ಸಾಕ್ಷಿಗೆ

ನಿಪಿ-4 ಛಾಯಾಚಿತ್ರದಲ್ಲಿ ಕಾಣಿಸಿದಂತಹಾ ಕಟ್ಟಡಕ್ಕೆ ಗೋಡೆ ಇದ್ದು ಅದಕ್ಕೆ ಗಾರೆ ಮಾಡಿ ಅದಕ್ಕೆ ಸುಣ್ಣ ಬಣ್ಣ ಒಂದು ಗೋಡೆಗೆ ಹಾಕಿದ್ದಾರೆ ಅದು ಕಟ್ಟಡ ಅಂತ ಸಾಕ್ಷಿಗೆ ಕೇಳಿದ್ದು ಅದು ಕಟ್ಟಡ ಅಲ್ಲಾ ಶೆಡ್ ಅಂತ ನುಡಿಯುತ್ತಾರೆ. ಸದ್ರಿ ಛಾಯಾಚಿತ್ರದಲ್ಲಿ ಕಾಣುವಂತಹಾ ಹೊಂಡ ಈಗ ತಕರಾರಿಗೆ ಸಂಬಂಧಪಟ್ಟ ಹೊಂಡ ಆಗಿದ್ದು ಮತ್ತು ಅದು ಗೋಡೆಗೆ ತಾಗಿ ಇರುವಂತಹಾ ಹೊಂಡ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ಅಧಿಕಾರಿಗಳು ವಿದ್ಯುತ್ ಸಂಪರ್ಕ ಕಡಿತಗೊಳಿಸದೇ ಇದ್ದಿದ್ದರಿಂದ ನಾನು ಮತ್ತು ನಮ್ಮ ಕುಟುಂಬದವರು ಎಲ್ಲಾ ಸೇರಿ 21-02-2023 ಕ್ಕೆ ಆರೋಪಿತರ ಮನೆಗೆ ಬೆಳಗಿನ ಜಾವ 6.00 ಗಂಟೆಗೆ ಹೋಗಿ ಅವರಿಗೆ ಹೆದರಿಸಿ, ಜಾತಿ ನಿಂದನೆ ಪ್ರಕರಣ ದಾಖಲಿಸುತ್ತೇವೆ ಅಂತ ಮಾನಸಿಕ ಕಿರುಕುಳ ನೀಡಿದ್ದೆವು ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನಮ್ಮ ಹಿಂಸೆ ತಾಳಲಾರದೇ 1 ನೇ ಆರೋಪಿ ಪಿನ್ನಾಯಿಲ್ ಸೇವನೆ ಮಾಡಿ ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದು ಅವಳನ್ನು 7.46 ಗಂಟೆಗೆ ಕುಂದಾಪುರ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ 7 ದಿನಗಳ ನಂತರ ಅವಳು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. 16-02-2023 ರ ರಾತ್ರಿ 8.30 ಗಂಟೆಗೆ ಹೊಂಡಕ್ಕೆ ಸಂಬಂಧಪಟ್ಟಂತೆ ಪ್ರಥಮವಾಗಿ ವಿಚಾರಣೆ ನನ್ನ ಮುಂದೆ ಬಂತು.

ಚಾಸಾ.1 ದೇವಿ ನನ್ನ ಚಿಕ್ಕಮ್ಮ ಫಿರ್ಯಾದಿ ನೀಡಿದ ವಿಷಯ ನನಗೆ ಗೊತ್ತು. ಅವರು ದಿನಾಂಕಃ22-02-2023 ಕ್ಕೆ ಫಿರ್ಯಾದಿ ನೀಡಿರುತ್ತಾಳೆ. ನನ್ನ ಚಿಕ್ಕಮ್ಮನಿಗೆ ಆರೋಪಿತಳು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ ವಿಚಾರ ಗೊತ್ತಾದ ನಂತರ ನಮ್ಮ ಮೇಲೆ ಪ್ರಕರಣ ದಾಖಲಾಗಬಹುದು ಎಂದು ಹೆದರಿ ನನ್ನ ಚಿಕ್ಕಮ್ಮ ಫಿರ್ಯಾದಿ ಕೊಟ್ಟಿದ್ದಾಳೆ ಎಂದರೆ ಸರಿ ಅಲ್ಲಾ. ನನ್ನ ಚಿಕ್ಕಮ್ಮನ ಜೊತೆಗೆ ಫಿರ್ಯಾದಿ ನೀಡಲು ಠಾಣೆಗೆ ನಾನು ಹೋಗಿದ್ದೆ. ನಿಪಿ-1 ಫಿರ್ಯಾದಿಯನ್ನು ಠಾಣೆಯಲ್ಲೇ ನಾವು ಬರೆದಿದ್ದೇವೆ. ಅದು ನನ್ನ ತಂಗಿ ಶೈಲಾ ಇವಳ ಹಸ್ತಾಕ್ಷರದಲ್ಲಿದೆ. ಸದ್ರಿ ಫಿರ್ಯಾದಿನಲ್ಲಿ ಬರೆದಂತಹಾ ಮಾಹಿತಿ ಅವಳೇ ಬರೆದಿರುತ್ತಾಳೆ. ಫಿರ್ಯಾದಿ ಕೊಡುವ ಸಮಯದಲ್ಲಿ ನಮ್ಮ ಜೊತೆಯಲ್ಲಿ ನಮ್ಮ ಜಗಳವನ್ನು ಸಮಾಧಾನ ಮಾಡಿದ ಪ್ರಮೋದ್ ರವರು ಬಂದಿದ್ದರು. ನಮ್ಮ ಜೊತೆಗೆ ನಮ್ಮ ಸಂಘಟನೆಯ ಮುಖಂಡರು ಯಾರೂ ಇರಲಿಲ್ಲ. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುವುದರಿಂದ ದೌರ್ಜನ್ಯ ಪ್ರಕರಣ ಕೂಡಲೇ ದಾಖಲಿಸಬೇಕೆಂಬ ಪ್ರಜ್ಞೆ ನನಗೆ ಇದೆ ಎಂದರೆ ಸಾಕ್ಷಿ ಹೌದು

ಅಂತ ನುಡಿಯುತ್ತಾರೆ. ಸಾಕ್ಷಿ ಮುನ್ನುಡಿದು ನನ್ನ ಚಿಕ್ಕಮ್ಮ ತನ್ನ ಮಕ್ಕಳ ಜೊತೆಗೆ ವಾಸವಾಗಿದ್ದು ಅವಳು ನಮ್ಮ ಕುಟುಂಬದವರಲ್ಲಿ ವಿಚಾರಣೆ ಮಾಡಿ ನಂತರ ಫಿರ್ಯಾದಿ ನೀಡಿದ್ದಾಳೆ ಅದಕ್ಕೆ ಫಿರ್ಯಾದಿ ನೀಡಲು ತಡವಾಗಿದೆ ಅಂತ ನುಡಿಯುತ್ತಾರೆ. ನಾನು ಪ್ರಕರಣ ನಡೆಯುವಾಗ ವೀಡಿಯೋ ಮಾಡಿದ್ದು ನಿಮಗೇನಾದರೂ ಅದೇ ದಿವಸ ಫಿರ್ಯಾದಿ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನೂ ಸಹಾ ಕುಟುಂಬದವರೊಂದಿಗೆ ವಿಚಾರ ಮಾಡಿ ಫಿರ್ಯಾದಿ ನೀಡಬೇಕಾಗಿರುವುದರಿಂದ ತಡವಾಗಿರುತ್ತದೆ ಅಂತ ನುಡಿಯುತ್ತಾರೆ.

ನಾನು ವಾಸವಾಗಿರುವ ಮನೆಯಿಂದ ನನ್ನ ಚಿಕ್ಕಮ್ಮ ದೇವಿರವರ ಮನೆ ಒಂದು 10 ಫೀಟು ಅಂತರದಲ್ಲಿದೆ. ಅವರು ನಮ್ಮ ಮನೆಗೆ ಬಂದು ಕರೆದಿರುತ್ತಾರೆ. ಆಗ ರಾತ್ರಿ 8.15 ಗಂಟೆ ಆಗಿತ್ತು. ನನ್ನ ಚಿಕ್ಕಮ್ಮ ಆರೋಪಿತರು ಹೊಂಡ ತೋಡುತ್ತಿರುವುದನ್ನು ನೋಡಿಕೊಂಡು ಬಂದು ನನ್ನನ್ನು ಕರೆದಿರುತ್ತಾರೆ. ನಾವೆಲ್ಲಾ ಆರೋಪಿತರ ಕಟ್ಟಡದ ಹತ್ತಿರ ಹೋಗುವಷ್ಟರಲ್ಲಿ ಅವರು ಅಲ್ಲಿಂದ ಹೋಗಿದ್ದರು ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಮೂರು ಜನರು ಇದ್ದರು. ನಾನು ಹೊಂಡದ ಹತ್ತಿರ ಹೋಗಿ ವೀಡಿಯೋ ಮಾಡಿರುತ್ತೇನೆ. ಆರೋಪಿತಳ ಮಗನ ಮೇಲೆ ಕೂಡಾ ನಾವು ಫಿರ್ಯಾದಿ ಕೊಟ್ಟಿರುತ್ತೇನೆ. ಬಾಲ ನ್ಯಾಯ ಮಂಡಳಿಯಲ್ಲಿ ಅವನ ತನಿಖೆ ಆಗಿ ಅವನು ನಿರಪರಾಧಿ ಎಂದು ಬಿಡುಗಡೆ ಆಗಿದ್ದು ನನಗೆ ಗೊತ್ತಿದೆ. ಆರೋಪಿತರ ಕಟ್ಟಡದ ಸಮೀಪ ದುಸ್ತಿನಾ ರವರ ಮನೆ, ಶ್ರೀದೇವಿ ಲೇಡೀಸ್ ಟೈಲರ್ ಅಂಗಡಿ, ಪ್ರಕಾಶ್ ರವರ ಗೂಡಾಂಗಡಿ, ಹೋಲಿ ಕ್ರಾಸ್ ಆಶ್ರಮ ಸಮೀಪದಲ್ಲಿದೆ ಎಂದರೆ ಸಾಕ್ಷಿ ಸರಿ ಅಂತ ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ 15 ರಿಂದ 20 ಜನ ಸ್ಥಳದಲ್ಲಿ ಸೇರಿದ್ದರು. ಪೋಲೀಸರಿಗೆ ನಾವು ಹೋದಾಗ ನಮ್ಮನ್ನು ಬಿಟ್ಟು ಸಾರ್ವಜನಿಕರು ಸಹಾ ಸೇರಿದ್ದರು ಎಂದು ಹೇಳಿಲ್ಲ. ಪೋಲೀಸರು ನನ್ನನ್ನು ವೈಯುಕ್ತಿಕವಾಗಿ ತನಿಖೆ ಮಾಡಿಲ್ಲ. ಫಿರ್ಯಾದಿ ನೀಡಲು ನಾವು ಹೋದಾಗ ನಾನು ಘಟನಾ ಸ್ಥಳದ ವೀಡಿಯೋ ಮಾಡಿಕೊಂಡಿದ್ದೇನೆ ಅಂತ ಪೋಲೀಸರಿಗೆ ಹೇಳಿಲ್ಲ ಮತ್ತು ಆ ವಿಷಯ ಫಿರ್ಯಾದಿನಲ್ಲಿ ಬರೆಸಿಲ್ಲ. 6 ದಿವಸ ತಡವಾಗಿ ನಾವು ಫಿರ್ಯಾದಿ ಕೊಟ್ಟರೂ ಸಹಾ ನಾನು ಫಿರ್ಯಾದಿ ನೀಡುವ ಸಮಯದಲ್ಲಿ ನಾನು ವೀಡಿಯೋ ಮಾಡಿಕೊಂಡಿದ್ದೇನೆ ಎಂಬ ವಿಷಯ ನಾನು ಪೋಲೀಸರಿಗೆ ತಿಳಿಸಿಲ್ಲ. ಆ ರೀತಿ ಪೋಲೀಸರ ಮುಂದೆ ಹೇಳಲು ನನಗೆ ಯಾವುದೇ ತೊಂದರೆ ಇಲ್ಲಾ. ಫಿರ್ಯಾದಿ

ಕೊಟ್ಟ ನಂತರ ಮಾರನೆ ದಿವಸ ಮಹಜರಿಗೆ ತನಿಖಾಧಿಕಾರಿಯವರು ಬಂದಾಗ ಅವರಿಗೆ ನಾನು ವೀಡಿಯೋ ಮಾಡಿಕೊಂಡ ವಿಷಯ ಹೇಳಿದ್ದೆ ಆ ದಿವಸ ಅವರು ನನ್ನ ಮೊಬೈಲ್ ತೆಗೆದುಕೊಂಡು ಹೋಗಿಲ್ಲ. ನಾನು ಸುಳ್ಳು ವೀಡಿಯೋ ಸೃಷ್ಟಿ ಮಾಡಿ ಯಾವುದೇ ಘಟನೆ ಆಗದಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಸ್ಥಳದಲ್ಲಿ ಮಹಜರಿಗೆ ಬಂದಾಗ ಒಂದು ಸಹಿ ಹಾಕಿದ್ದೇನೆ. ಮೊಬೈಲನ್ನು ಪೋಲೀಸರು ನನ್ನಿಂದ ಪಡೆದುಕೊಂಡಾಗ ಒಂದು ಸಹಿ ಮಾಡಿರುತ್ತೇನೆ. ನಾನು ವೀಡಿಯೋವನ್ನು ಮಾಡುವಾಗ ನಡೆದಂತಹಾ ಎಲ್ಲಾ ಘಟನೆ ವೀಡಿಯೋ ಆಗಿದೆ ಎಂದರೆ ಸಾಕ್ಷಿ ಹೊಂಡ ತೆಗೆದಿದ್ದು ಮಾತ್ರ ವೀಡಿಯೋ ಆಗಿದೆ ಆದರೆ ಆರೋಪಿತರು ಜಾತಿ ನಿಂದನೆ ಮಾಡಿದ್ದು ವೀಡಿಯೋ ಆಗಿಲ್ಲ ಅಂತ ನುಡಿಯುತ್ತಾರೆ. ಆರೋಪಿತರು ನಮಗಾಗಲೀ, ನನ್ನ ಚಿಕ್ಕಮ್ಮನಿಗಾಗಲೀ ಯಾವತ್ತೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಜಾತಿ ನಿಂದನೆ ಮಾಡಿಲ್ಲ ಜೀವ ಧಮಿಕಿ ಹಾಕಿಲ್ಲ ಮತ್ತು ನಾನು ಹೇಳಿದಂತೆ ಯಾವತ್ತೂ ಹೊಂಡ ತೆಗೆದಿಲ್ಲ ಎಂದರೆ ಸರಿ ಅಲ್ಲಾ. ನಾನು ಹಾಜರುಪಡಿಸಿದ ವೀಡಿಯೋ ಆರೋಪಿತರದ್ದು ಆಗಿದ್ದೇ ಇಲ್ಲಾ ಎಂದರೆ ಸರಿ ಅಲ್ಲಾ. ನಾನು 65 ಬಿ ರಡಿಯಲ್ಲಿ ಯಾವುದೇ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿ ಅಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವೆಲ್ಲಾ ಸುಳ್ಳು ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**